ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೆಳ್ತಂಗಡಿ

ಸಿ.ಸಿ. 481/2025

ಸಾಕ್ಷಿದಾರರ ಹೆಸರು : ಯಶೋಧ

ತಂದೆಯ ಹೆಸರು : ಸತೀಶ ಶೆಟ್ಟಿ DW-1

ವಯಸ್ಸು : 56 ವರ್ಷ

ಉದ್ಯೋಗ : ಗೃಹಿಣಿ

ಪ್ರಮಾಣ ವಚನ ಬೋಧಿಸಲಾಯಿತು ದಿನಾಂಕ 16.06.2026

ವಾಸ ಸ್ಥಳ : ಬಡಗಕಾರಂದೂರು ಗ್ರಾಮ

ಮುಖ್ಯ ವಿಚಾರಣೆ ಃ- ಶ್ರೀ ಎನ್ ಬಿ ಹೆಚ್ ವಕೀಲರಿಂದ, ಆರೋಪಿಯ ಪರವಾಗಿ,

ನಾನು 2012ರಲ್ಲಿ ರೂ.60,000/- ಹಣವನ್ನು ದೂರುದಾರರಿಂದ ಸಾಲವಾಗಿ ಪಡೆದಿರುತ್ತೇನೆ. ಆಗಾಗ ಸದರಿ ಹಣವನ್ನು ಕಟ್ಟುತ್ತಾ ಬರುತ್ತಿದ್ದೆ, ಆದರೂ ಸಹ ದಿಃ30.09.2024ರಂದು ಸಾಲ ವಸೂಲಾತಿ ಅಧಿಕಾರಿಯವರು ಸಂಪೂರ್ಣ ಹಣವನ್ನು ಪಾವತಿಸಿ ಸಾಲವನ್ನು ಮುಕ್ತಾಯಗೊಳಿಸಿ ಎಂದು ಹೇಳಿದ ಕಾರಣ ನಾನು ಸಂಪೂರ್ಣ ಸಾಲವನ್ನು ಮರುಪಾವತಿ ಮಾಡಿರುತ್ತೇನೆ. ದಿಃ25.04.2025ರಂದು ನನಗೆ ಒಂದು ನೋಟೀಸ್ ಬಂದಿತ್ತು. ಆಗ ರೂ.2,000/- ಹಣವನ್ನು ತೆಗೆದುಕೊಂಡು ಮ್ಯಾನೇಜರ್ ಬಳಿ ಹೋಗಿ ಕಟ್ಟುತ್ತೇನೆ ಎಂದು ಕೇಳಿದಾಗ, ಈಗ ಬೇಡ ಎಂದು ಅವರು ಹೇಳುತ್ತಾರೆ. ಆದರೂ ಸಹ 2025ರ ನವೆಂಬರ್ ತಿಂಗಳಿನಲ್ಲಿ ನನಗೆ ಕೋರ್ಟ್ ನಿಂದ ನೋಟೀಸ್ ಬಂದಿರುತ್ತದೆ. ನಾನು ರೂ.2,000/- ಹಣವನ್ನು ಕಟ್ಟಲು ಹೋದಾಗ ನನ್ನನ್ನು ಹಾಗೂ ಜಾಮೀನುದಾರರನ್ನು ವಕೀಲರ ಕಛೇರಿಗೆ ಕರೆದುಕೊಂಡು ಹೋಗಿ ಖಾಲಿ ಹಾಳೆಗೆ ಸಹಿ ಪಡೆದುಕೊಂಡರು. ಈ ಪ್ರಕರಣ ದಾಖಲಾದ ನಂತರ ವ್ಯವಸ್ಥಾಪಕರು ನನಗೆ ಕರೆ ಮಾಡಿ ನಿಮಗೆ ಹಣ ಕಟ್ಟಲು ಆಗುದಿಲ್ಲವಾ, ಮಾನ ಮರ್ಯಾದೆ ಇಲ್ಲವಾ ಎಂದು ಬೈದಿರುತ್ತಾರೆ. ಮಂಜುನಾಥ ಸ್ವಾಮಿ ನಿಮ್ಮನ್ನು ನೋಡುತ್ತಾರೆ ಎಂದು ಬೈದಿರುತ್ತಾರೆ.

ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ